# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

## ಸಿಸಿ ಸಂಖ್ಯೆ: 588/2023

| | | |
|---|---|---|
| ಹೆಸರು | : | ಸಂಪತ್ |
| ತಂದೆಯ ಹೆಸರು | : | ಸೀತಾರಾಮ ಭಂಡಾರಿ |
| ಪ್ರಾಯ | : | 30 ವರ್ಷ |
| ಉದ್ಯೋಗ | : | ಕ್ಷೌರಿಕ |
| ವಾಸ | : | ಉಜಿರೆ, ಬೆಳ್ತಂಗಡಿ ತಾಲೂಕು |

**ದಿನಾಂಕ 30.09.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ದಿಃ 20.1.2022 ರಂದು ಚಾಸಾ1 ರವರ ಮದುವೆ 1ನೇ ಆರೋಪಿಯ ಜೊತೆ ಆಗಿದ್ದು, ಚಾಸಾ1 ರವರ ಕುಟುಂಬದವರ ಮನೆ ಕಾರ್ಕಳದಲ್ಲಿ ಇರುತ್ತದೆ. ದಿಃ 23.1.2022 ರಂದು 1ನೇ ಆರೋಪಿ 2ನೇ ಆರೋಪಿ ಮತ್ತು ಆತನ ಮಾವನೊಂದಿಗೆ ಮುಂಬೈಗೆ ಹೋಗಿರುತ್ತಾರೆ. ಹೋದ ಸ್ವಲ್ಪ ದಿನಗಳ ಕಾಲ ಚೆನ್ನಾಗಿಯೇ ಇದ್ದರು. ಆನಂತರ ಚಾಸಾ1 ರವರು ಮಾಡುವ ಕೆಲಸದಲ್ಲಿ ಆರೋಪಿತರು ತಪ್ಪನ್ನು ಹುಡುಕಿ ಕಾರಣವಿಲ್ಲದೆ ಬೈಯ್ಯುತಿದ್ದರು ಎಂದು ತಿಳಿಸಿರುತ್ತಾರೆ. ವರದಕ್ಷಿಣೆ ಹಣವನ್ನು ತಂದಿಲ್ಲ ಎಂದು ಪೀಡಿಸುತ್ತಿದ್ದರು. 1ನೇ ಆರೋಪಿ ರಾತ್ರಿ ಸಮಯದಲ್ಲಿ ಮನೆಗೆ ಬರುತ್ತಿರಲಿಲ್ಲ. ಕಾರಣ ಏನು ಎಂದು ವಿಚಾರಿಸಿದಾಗ 1ನೇ ಆರೋಪಿಗೆ ಬೇರೆಯವರ ಜೊತೆ ಸಂಪರ್ಕ ಇರುವುದು ಕಂಡುಬಂದಿತ್ತು. ಅದನ್ನು ಚಾಸಾ1 ರವರು ವಿರೋಧಿಸಿದಾಗ ಆ ವಿಚಾರದಲ್ಲಿ ನೀನು ತಲೆ ಹಾಕಬಾರದು ನಿನಗೂ ಅದಕ್ಕೂ ಸಂಬಂಧ ಇರುವುದಿಲ್ಲ, ನನಗೆ ಇಷ್ಟ ಬಂದ ಹಾಗೆ ಇರುತ್ತೇನೆ ಎಂದು ಹೇಳಿ ದಿಃ 29.3.2022 ರಂದು 1ನೇ ಆರೋಪಿ ಚಾಸಾ1 ರವರ ಬೆನ್ನಿಗೆ ಕೈಯಿಂದ ಹಲ್ಲೆ ಮಾಡಿರುತ್ತಾರೆ. ಕೆಲವು ದಿನಗಳ ಕಾಲ ಸರಿಯಾಗಬಹುದು ಎಂದು ಚಾಸಾ1 ರವರು ಎಲ್ಲವನ್ನೂ ತಡೆದುಕೊಂಡು

ಇದ್ದರು, ಆದರೂ ಸಹ ಸರಿಯಾಗಲಿಲ್ಲ. ಚಾಸಾ1 ರವರ ಜೀವನ ದಿನದಿಂದ ದಿನಕ್ಕೆ ನರಕ ಆಗಿತ್ತು. ದಿಃ 2.4.2022 ರಂದು ರಾತ್ರಿ 10 ಗಂಟೆಗೆ 1ನೇ ಆರೋಪಿ ಮನೆಯಿಂದ ಹೊರಗೆ ಹೊರಟಾಗ ಚಾಸಾ1 ರವರು ಪ್ರತಿಭಟಿಸಿ ಯಾವ ಕಾರಣಕ್ಕೆ ಮನೆಯಿಂದ ಹೊರಗೆ ಹೋಗುತ್ತೀಯಾ ಎಂದು ಕೇಳಿದಾಗ 1ನೇ ಆರೋಪಿ ನಿನಗೆ ಅದರ ಅಗತ್ಯ ಇರುವುದಿಲ್ಲ, ಅಧಿಕ ಪ್ರಸಂಗ ಮಾಡಬಾರದು ಎಂದು ಹೇಳಿ, ನನ್ನ ಮನೆಯಲ್ಲಿ ಇರಬೇಡ ತವರು ಮನೆಗೆ ಹೋಗು ಎಂದು ಹೇಳಿ ಚಾಸಾ1 ರವರಿಗೆ ಹೊಡೆದು ಅವರ ಕುತ್ತಿಗೆಯಲ್ಲಿದ್ದ ಕರಿಮಣಿ ಸರವನ್ನು ಕಿತ್ತು ಹಾಕಿರುತ್ತಾರೆ. ಮಾರನೇ ದಿನ ವಿಮಾನದ ಟಿಕೇಟ್ ಮಾಡಿಸಿ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ. ದಿಃ 3.4.2022 ರಂದು ಚಾಸಾ1 ರವರು ನಮ್ಮ ಮನೆಗೆ ಬಂದಿದ್ದು, ಆನಂತರ ನಾವು ಚಾಸಾ1 ರವರ ಸಂಸಾರವನ್ನು ಸರಿಮಾಡಲು 1ನೇ ಆರೋಪಿಯ ಮನೆರೆ ದೂರವಾಣಿ ಕರೆ ಮಾಡಿದಾಗ ನಮ್ಮ ಜೊತೆ ಮಾತನಾಡಲು ಇಷ್ಟ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಕೊನೆಗೆ ನಾವು ನಮ್ಮ ಜಾತಿಗೆ ಸಂಬಂಧಪಟ್ಟ ಕಚೂರು ನಾಗೇಶ್ವರ ದೇವಸ್ಥಾನದಲ್ಲಿ ಜಾತಿಯ ಹಿರಿಯರಾದ ಸುರೇಶ್ ಭಂಡಾರಿ ಖಡಂದಲೆ, ಸದಾಶಿವ ಭಂಡಾರಿ ಇವರಿಂದ ದಿಃ 11.6.2022 ಮಾತುಕತೆ ಮಾಡಿಸಿರುತ್ತೇವೆ. ಆದರೂ ಸಹ ಮಾತುಕತೆಗೆ ಒಪ್ಪಿರುವುದಿಲ್ಲ, ಕೊನೆಗೆ ಬೇರೆ ದಾರಿ ಇಲ್ಲದೆ ಪ್ರಕರಣವನ್ನು ದಾಖಲಿಸಿರುತ್ತೇವೆ. ಚಾಸಾ1 ರವರನ್ನು ಮನೆಯಿಂದ ಕಳುಹಿಸುವಾಗ 1ನೇ ಆರೋಪಿ ಅವರಿಗೆ ಅಶ್ಲೀಲವಾಗಿ ಬೈದು ಮಾನಸಿಕ ಮತ್ತು ದೈಹಿಕವಾಗಿ ಕಿರುಕುಳ ನೀಡಿರುತ್ತಾರೆ. ಅಲ್ಲದೆ ವಿಚಾರವನ್ನು ಬೇರೆಯವರ ಹತ್ತಿರ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದು ತಿಳಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದಾರೆ. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಈ ದಿನ ಆರೋಪಿತರು ಖುದ್ದು ವಿನಾಯಿತಿಗೆ ಅರ್ಜಿ ಸಲ್ಲಿಸಿರುವುದರಿಂದ ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

( ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ